INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-5, Issue -2, March-April, 2023,
PageNo,44-51
Peer -Reviewed, Refereed Journal

# ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ವಿಶ್ವಧರ್ಮ– ಒಂದು ಅವಲೋಕನ

ಡಾ. ಶಿವಶಂಕರ .ಎಸ್.[1]

ಭಾರತೀಯ ಸಂಸ್ಕೃತಿಯನ್ನು ಅರಿತುಕೊಳ್ಳಬೇಕಾದರೆ ಮೊದಲು ವಿವೇಕಾನಂದರನ್ನು ತಿಳಿದುಕೊಳ್ಳಬೇಕು ಎನ್ನುವ ಮಾತಿಗೆ ಪುಷ್ಠಿ ನೀಡುತ್ತಿರುವ ವಿವೇಕಾನಂದರ ಚಿಂತನೆ ಮಹತ್ವಪೂರ್ಣವಾದುದು.ಶ್ರೀರಾಮಕೃಷ್ಣ ಪರಮಹಂಸರ ಗರಡಿಯಲ್ಲಿ ಪಳಗಿ ರೂಪುಗೊಂಡ ವಿವೇಕಾನಂದರದು ಬಹುಮುಖ ವ್ಯಕ್ತಿತ್ವ. ವೀರಸನ್ಯಾಸಿ, ವಿಶ್ವಮಾನವ, ಮಾನವತಾವಾದಿ, ದೇಶಪ್ರೇಮಿ, ಅನುಷ್ಠಾನ ವೇದಾಂತಿ, ಶ್ರೇಷ್ಠ ಆಧ್ಯಾತ್ಮಿಕ ವ್ಯಕ್ತಿ. ಅದ್ವೈತ ಪ್ರತಿಪಾದಕ, ಕೇವಲ ಆಧ್ಯಾತ್ಮಕ ವಿಷಯಗಳಿಗೆ ಮಾತ್ರ ತಮ್ಮ ಅಂತರದೃಷ್ಟಿಯನ್ನು ಸೀಮಿತಗೊಳಿಸದೆ, ತತ್ವಶಾಸ್ತ್ರ, ತರ್ಕಶಾಸ್ತ್ರ, ಕಲೆ, ವಿಜ್ಞಾನ, ಇತಿಹಾಸ, ಸಮಾಜಶಾಸ್ತ್ರ, ರಾಜನೀತಿಶಾಸ್ತ್ರ, ಮನಶಾಸ್ತ್ರ, ಸಂಗೀತ ಇನ್ನೂ ಅನೇಕ ಶಾಸ್ತ್ರಗಳನ್ನು ಅಭ್ಯಾಸಮಾಡಿ ಮಾನವನ ಸರ್ವತೋಮುಖ ಬೆಳವಣಿಗೆಗೆ ಅತ್ಯಂತ ಅವಶ್ಯಕವಾದ ಎಲ್ಲ ವಿಷಯಗಳನ್ನು ಸ್ವೀಕರಿಸಿ ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಅವುಗಳನ್ನೆಲ್ಲ ಸಮನ್ವಯಗೊಳಿಸಿ ನಮ್ಮ ಮುಂದೆ ಇಟ್ಟಿರುವರು.

ಮಹಾತ್ಮರು "ಹುಟ್ಟಿದ ಕುಲ ಪವಿತ್ರ ಹೆತ್ತ ತಾಯಿ ಧನ್ಯಳು.ಹೊತ್ತ ದೇಶ ಪುಣ್ಯವತಿಯಾಗುವಳು"1 ಎಂಬ ನಾಣ್ನುಡಿಯಂತೆ ಸ್ವಾಮಿವಿವೇಕಾನಂದರದು ಕಾಯಸ್ಥ ಅಥವಾ ಕ್ಷತ್ರಿಯ ಕುಲ, ದತ್ತ ಮನೆತನಕ್ಕೆ ಸೇರಿದರು. ಕಲ್ಕತ್ತಾ ನಗರದ ಶೀಮ್ಲಾ ಎಂಬಲ್ಲಿ '12 ಜನವರಿ 1863ರಂದು ವಿಶ್ವನಾಥದತ್ತ ಮತ್ತು ಭುವನೇಶ್ವರೀದೇವಿಯವರ ಮಗನಾಗಿ ವಿವೇಕಾನಂದರು ಧರೆಗಿಳಿದರು'.ಪ್ರಾರಂಭದಲ್ಲೇ ಮಾನವ ಕಂಡುಕೊಂಡ ಅನೇಕ ಅಂಶಗಳಲ್ಲಿ ಧರ್ಮವೆಂಬುದು ಪ್ರಮುಖವಾದುದು.ರಕ್ತ ಸಂಬಂಧಕ್ಕಿಂತಲೂ ಹೆಚ್ಚು ಪರಿಣಾಮವನ್ನು ಬೀರುವಂತದ್ದಾಗಿದೆ. ಧರ್ಮ ಈ ಭೂಮಿಯ ಮೇಲೆ ಜನಿಸಿದ ಪ್ರತಿಯೊಬ್ಬ ಮನುಷ್ಯನು ಯಾವುದಾದರೂ ಒಂದು ಧರ್ಮದ ಅಧೀನಕ್ಕೆ ಸಿಲುಕಿಕೊಂಡಿರುವುದನ್ನು ನಾವು ಇಂದು ಸಹ

[1]. ಅಧ್ಯಾಪಕರು, ತತ್ವಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ,ಮಾನಸಗಂಗೋತ್ರಿ,ಮೈಸೂರು.

ಕಾಣಬಹುದು. ಧರ್ಮ ಮಾನವ ಹುಟ್ಟಿದಾಗಿನಿಂದ ಆತ ಕೊನೆಯ ಉಸಿರು ಹೋಗುವ ತನಕ ಆತನ ಹಿಂದೆ ಅಂದರೆ ಆತನ ನೆರಳಿನಂತೆ ಬಂದಿರುತ್ತದೆ.

ಇಂತಹ ಧರ್ಮಗಳು ಮನುಷ್ಯರ ಯಶಸ್ಸಿನ ಕನಸ್ಸನ್ನು ಕಂಡಂತಹವು.ಆದರೆ ಇಂದು ಧರ್ಮ ಮಾನವರ ಒಳಿತಿಗಿಂತ ಕೆಡುಕಿನ ಕಡೆಗೆ ಹೆಚ್ಚು ವಾಲುತ್ತಿರುವುದು ಅಪಾಯದ ಮುನ್ಸೂಚನೆಯಾಗಿದೆ.ಇದಕ್ಕೆ ಕಾರಣವನ್ನು ಹುಡುಕುವುದಕ್ಕೆ ಹೊರಟರೆ ನಮಗೆ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಧರ್ಮವನ್ನು ಮಾನವರು ಸರಿಯಾಗಿ ಅರ್ಥೈಸದೆ ದುರುಪಯೋಗ ಮಾಡಿಕೊಂಡಿರುವುದು ಧರ್ಮದ ನೈಜ ಅರ್ಥವನ್ನು ಇಡೀ ಜಗತ್ತಿನ ಜನರಿಗೆ ತಿಳಿಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟರು ವಿವೇಕಾನಂದರು.ಪ್ರಸ್ತುತ ಯುಗದಲ್ಲಿ ಸ್ವಾಮಿ ವಿವೇಕಾನಂದರು ವಿಶ್ವಧರ್ಮದ ಬಗ್ಗೆ ತಾಳಿರುವ ನಿಲುವು ಅತ್ಯಂತ ಪ್ರಮುಖವಾದುದು. ವಿಶ್ವಧರ್ಮವನ್ನು ಕುರಿತ ಅವರ ದೃಷ್ಟಿ ಕ್ರಾಂತಿಕಾರಿಯಾದುದು.ಇಡೀ ಜಗತ್ತಿನ ಕಣ್ಣನ್ನೇ ತೆರೆಸುವಂತಹದು.ಅವರದು ಮುಕ್ತ ಮನಸ್ಸು.ಒಳ್ಳೆಯದು ಎಲ್ಲಾ ಕಡೆಯಿಂದಲೂ ನಮ್ಮೆಡೆಗೆ ಬರಲಿ ಎಂಬ ಉದಾರ ಮನೋಭಾವ ಅವರದು.'ವಿಶ್ವಧರ್ಮವೆಂದರೆ ಸಮಸ್ತ ಮಾನವ ಕೋಟಿಯ ಹಿತವನ್ನು ಉದ್ದಾರವನ್ನು ಬಯಸುವಂತದ್ದು ಎನ್ನುತ್ತಾರೆ ವಿವೇಕಾನಂದರು.ಸ್ವಾಮಿವಿವೇಕಾನಂದರು ತೋರಿದ ವಿಶ್ವಧರ್ಮದ ದಾರಿ ಕೇವಲ ಒಬ್ಬನಿಗೆ, ಒಂದು ಸಮಾಜಕ್ಕೆ, ಒಂದು ರಾಷ್ಟ್ರಕ್ಕೆ ಅಥವಾ ಒಂದು ಧರ್ಮಕ್ಕೆ ಮೀಸಲಾಗಿರದೆ ಜಗತ್ತಿನ ಇಡೀ ಮಾನವ ಜೀವರಾಶಿಗೆ ಅನ್ವಯಿಸುವಂತದ್ದು. ವಿಶ್ವಧರ್ಮವು ಸಹೋದರತೆ, ಮಾನವತೆ, ವಿಶ್ವಭ್ರಾತೃತ್ವವನ್ನು ಒತ್ತಿ ಹೇಳುತ್ತದೆ.ಮಾನವರಲ್ಲಿ ಭೇದಭಾವ ಇರುವ ಗುಂಪುಗಳು ಹೇಗೆ ಧರ್ಮದ ಪ್ರತಿಪಾದನೆ ಮಾಡಲು ಸಾಧ್ಯ?ಭೇದವಿರಬಾರದು.ಭೇದವಿರಬೇಕಾದುದು ಜ್ಞಾನ–ಅಜ್ಞಾನಗಳ ನಡುವೆ, ಶಿಷ್ಟ–ದುಷ್ಟಗಳ ನಡುವೆ ಮಾತ್ರ ಇರಬೇಕು. ವಿಶ್ವಧರ್ಮಗಳು ಇಂತಹ ಅಜ್ಞಾನದಲ್ಲಿರುವವರನ್ನು ಮೇಲೆತ್ತಲು ಸಹಾಯಕವಾಗಬೇಕು.

ಲೋಕದಲ್ಲಿ ಅಂಧಕಾರದಲ್ಲಿರುವ ಮುಗ್ಧ ಜನರಿಗೆ ಬೆಳಕಿನ ಕಡೆಗೆ ನಡೆಯಲು ದಾರಿದೀಪವಾಗಬೇಕು.ಅದೇ ಬದುಕಿನ ನಿಜವಾದ ಗುರಿ ಎಂದು ವಿವೇಕಾನಂದರು ಹೇಳುತ್ತಾರೆ.ಜಗತ್ತಿನಲ್ಲಿ ವಾಸಿಸುತ್ತಿರುವ ಇಡೀ ಮಾನವ ಲೋಕ ಚಿಂತನಶೀಲವಾಗಿ ಅನುಸರಿಸಬಹುದಾದ ಧರ್ಮ ವಿಶ್ವಕ್ಕೆಲ್ಲಾ ಅನ್ವಯಿಸುವ ಧರ್ಮಬೇಕು ಎನ್ನುತ್ತಾರೆ ವಿವೇಕಾನಂದರು.

ವಿವೇಕಾನಂದರ ಪ್ರಕಾರ ಧರ್ಮವೆಂಬುದು ಕೇವಲ ಗ್ರಂಥಗಳಲ್ಲಿ ಅಡಕವಾಗಿರುವ ನಿಯಮವಲ್ಲ. ಎಲ್ಲಾ ವಸ್ತುಗಳಲ್ಲಿರುವ ಅವ್ಯಕ್ತವಾಗಿರುವ ದೈವತ್ವವನ್ನು ವ್ಯಕ್ತಗೊಳಿಸುವುದೇ ಧರ್ಮವಾಗಿದೆ. ಹಾಗಾಗಿ ಧರ್ಮವನ್ನು ಜೀವನದ ಎಲ್ಲಾ ಕ್ಷೇತ್ರದಲ್ಲೂ ಅಳವಡಿಸಿಕೊಳ್ಳಬೇಕು. ಎಲ್ಲಾ ಸಂಕುಚಿತತೆಯನ್ನು

ನೀಗಿಸಿಕೊಳ್ಳುವುದೇ ಧರ್ಮವಾಗಿದ್ದು 'ವಿಕಾಸವೇ ಧರ್ಮ ಸಂಕುಚಿತವೇ ನಾಶ' ಎನ್ನುವ ವಿವೇಕಾನಂದರ ಮಾತು ಅರ್ಥಗರ್ಭಿತವಾದುದು.ಪ್ರಪಂಚವು ರಾಷ್ಟ್ರ, ರಾಜ್ಯ, ಜಿಲ್ಲೆ, ತಾಲ್ಲೂಕು, ಹೋಬಳಿ, ಹಳ್ಳಿಗಳಾಗಿ ವಿಭಾಗ ಹೊಂದಿರುವಂತೆ ಧರ್ಮವು ಸಹ ಭಿನ್ನಭಿನ್ನವಾಗಿ ಅಂದರೆ ಕುಲ, ಜಾತಿ, ಮತಧರ್ಮ, ರಾಷ್ಟ್ರಧರ್ಮ, ವಿಶ್ವಧರ್ಮವಾಗಿ ರೂಪುಗೊಂಡಿರುವುದನ್ನು ನಾವು ಇಂದು ಸಹ ನೋಡಬಹುದು.ಪೌರಾತ್ಯರು ಮತ್ತು ಪಾಶ್ಚಿಮಾತ್ಯರು, ಧರ್ಮದ ಏಕತೆಯ ಬಗ್ಗೆ ಒಮ್ಮತಕ್ಕೆ ಬರಲು ಸಾಧ್ಯವಿಲ್ಲ. ಇದು ಕನಸ್ಸಿನ ಮಾತು.ಧರ್ಮದ ಗುರಿ 'ವಿಶ್ವಪ್ರೇಮವಾಗಿದ್ದರೂ ಮತಧರ್ಮವು ಸ್ಥಳೀಯವೂ, ವ್ಯಕ್ತಿಗತವು ಆಗಿರುವುದರಿಂದ ಸೌಹಾರ್ದದ ಬೆಳವಣಿಗೆಗೆ ಅಡ್ಡಿ ತರುತ್ತದೆ. ಕ್ರೈಸ್ತಧರ್ಮದವರನ್ನೆಲ್ಲಾ ಒಂದುಗೂಡಿಸಲು ನಡೆಸಿರುವ ಪ್ರಯತ್ನ ಪ್ರಯತ್ನವಾಗಿಯೇ ಉಳಿದಿದೆ.

ಹಿಂದೂ ಧರ್ಮವು ಇದಕ್ಕೆ ಹೊರತಾಗಿಲ್ಲ. ಏಕೆಂದರೆ ಧಾರ್ಮಿಕರು, ಸುಧಾರಕರು, ಆಚಾರ್ಯರು, ದಾರ್ಶನಿಕರು, ಕವಿಗಳು ಮತ್ತು ಧರ್ಮ ಸಂಸ್ಥಾಪಕರು ಕ್ರಿ.ಪೂ. ಆರನೇ ಶತಮಾನದಿಂದ ಕ್ರಿ.ಶ 21ನೇ ಶತಮಾನದವರೆಗೂ ಹಿಂದೂ ಧರ್ಮದ ಬಗ್ಗೆ ನಡೆಸಿರುವ ಪ್ರಯತ್ನ ಪ್ರಯತ್ನವಾಗಿಯೇ ಉಳಿದಿದೆ. ಅಂದರೆ ಹಿಂದೂ ಧರ್ಮದಲ್ಲಿ ವ್ಯಾಪಕತೆ ಮತ್ತು ಸೌಹಾರ್ದ ಮನೋಭಾವಕ್ಕೆ ಹೆಚ್ಚು ಹೆಚ್ಚು ಪ್ರಯತ್ನಪಟ್ಟರು, ಅನುಷ್ಠಾನದಲ್ಲಿ ತೃಪ್ತಿಕರವಾದ ಮನೋಭಾವ ಕಂಡುಬರುವುದಿಲ್ಲ. ಈ ವಿಶ್ವದಲ್ಲಿ ಮಾನವನು ಅನುಸರಿಸುವ ಎಲ್ಲಾ ಬೇರೆ ಬೇರೆ ಮಾರ್ಗಗಳು ಕೊನೆಗೆ ಅಂತಿಮ ಸತ್ಯದಲ್ಲಿ ಏಕತೆಯನ್ನು ಪಡೆಯುತ್ತವೆ ಎಂದು ಅರಿಯಬೇಕಾಗಿದೆ. ಎಲ್ಲಾ ಜೀವಿಗಳಲ್ಲಿಯೂ ಅಡಗಿರುವ ನಿತ್ಯಸತ್ಯವನ್ನು ಗ್ರಹಿಸುವುದೇ ವಿಶ್ವಧರ್ಮದ ಮೂಲ ಧ್ಯೇಯ ಎನ್ನುತ್ತಾರೆ ವಿವೇಕಾನಂದರು.ಈ ವಿಶಾಲ ವಿಶ್ವದಲ್ಲಿ ಅನೇಕ ಜಾತಿಗಳಿವೆ. ಒಂದೊಂದು ದೇವರ ಹೆಸರಿನಲ್ಲಿ ಒಂದೊಂದು ಬುಡಕಟ್ಟು ಧರ್ಮಗಳಿರುವುದನ್ನು ನೋಡಬಹುದು.ಅನೇಕ ಜನಾಂಗಗಳಿವೆ. ಅವರವರ ಮಾನಸಿಕ ಮಟ್ಟಕ್ಕೆ ತಕ್ಕಂತೆ ಧರ್ಮವನ್ನು ರೂಪಿಸಿಕೊಂಡಿರುವುದು ಸತ್ಯದ ಸಂಗತಿ.

ಆದರೆ ಇಂದು ಕೆಲವು ಸಂಘ ಸಂಸ್ಥೆಗಳು ತಮ್ಮ ಸ್ವಾರ್ಥದ ಬೇಳೆ ಬೇಯಿಸಿಕೊಳ್ಳಲು ತಮ್ಮ ಧರ್ಮ ಮತ್ತು ದೇವರು ಶ್ರೇಷ್ಠವೆಂದು ಉಳಿದ ಧರ್ಮಗಳು ಕೀಳೆಂದು ಭಿನ್ನಾಭಿಪ್ರಾಯವನ್ನು ಮೂಡಿಸಿ ಮಾನವ ದಿನನಿತ್ಯ ಕಿತ್ತಾಡುತ್ತಿರುವುದನ್ನು 21ನೇ ಶತಮಾನದಲ್ಲಿಯೂ ನೋಡಬಹುದು.ಇದಕ್ಕೆ ಉತ್ತರವಾಗಿ ವಿವೇಕಾನಂದರ ದೃಷ್ಟಿಯಲ್ಲಿ ವಿಶ್ವಧರ್ಮವೆಂದರೆ 'ಮಾನವನನ್ನು ಮಾನವನನ್ನಾಗಿ ನೋಡುವ ಮಾನವತಾಧರ್ಮ' ಅಂದರೆ ಸಹೋದರತೆ, ಭ್ರಾತೃತ್ವ, ಪ್ರೀತಿ, ತ್ಯಾಗ, ಮಾನವೀಯ ಮೌಲ್ಯಗಳಿಂದ ಕೂಡಿದ ಮಾನವ ಬದುಕಿಗೆ ಆಸರೆಯಾಗುವ ವಿಶಾಲ ಹೃದಯವುಳ್ಳ ವಿಶ್ವಧರ್ಮ ಬೇಕು ಎನ್ನುತ್ತಾರೆ ವಿವೇಕಾನಂದರು.

ವಿಶ್ವಧರ್ಮವೆಂದರೆ ಇಡೀ ಮಾನವ ಜನಾಂಗಕ್ಕೆಲ್ಲ ಅನ್ವಯಿಸುವಂತಹ ಧರ್ಮ.ಇಲ್ಲಿ ಸಂಕುಚಿತ ಭಾವನೆಗಳಿಗೆ ಅವಕಾಶ ಇರಕೂಡದು.ಈ ಜಗತ್ತಿನಲ್ಲಿ ದೇವರನ್ನು ನಂಬದ ಎಷ್ಟೋ ಆಧ್ಯಾತ್ಮ ಜೀವಿಗಳು ಇರಲು ಸಾಧ್ಯ.ಅಂತಹವರನ್ನು ವಿಶ್ವಧರ್ಮ ಗೌರವಿಸಬೇಕು ಎನ್ನುತ್ತಾರೆ ವಿವೇಕಾನಂದರು. ವಿಶ್ವಧರ್ಮದಲ್ಲಿ ಮಾನವೀಯ ಮೌಲ್ಯಗಳೇ ಮುಖ್ಯ ಬಾಹ್ಯ ಪ್ರತೀಕಗಳಿಂದ ಬಡವ–ಶ್ರೀಮಂತ, ಕುಲ, ಜಾತಿ, ಭೇದ ಇವೆಲ್ಲ ಮಾನವನಿಂದ ನಿರ್ಮಿತವಾದವುಗಳು. ಮಾನವೀಯತೆಯನ್ನು ಎತ್ತಿಹಿಡಿದು ಮಾನವನ ಅಭ್ಯುದಯ ಇಲ್ಲಿ ಮುಖ್ಯ! ಯಾವ ಧರ್ಮದ ಮೇಲಾಗಲಿ ದೇವರ ಹೆಸರಿನಿಂದಾಗಲಿ, ಅವಲಂಭಿತವಾಗಿಲ್ಲ. ಸರ್ವ ಮಾನವರ ಅಭಿವೃದ್ಧಿಯೇ ವಿಶ್ವಧರ್ಮದ ಮೈಲಿಗಲ್ಲು.ಮಾನವನು ಯಾವುದೇ ಧರ್ಮವನ್ನಾದರೂ ಆಚರಿಸಲಿ ಮತ್ತು ತನಗೆ ಇಷ್ಟವಾದ ಯಾವ ದೇವರನ್ನು ಬೇಕಾದರೂ ಪೂಜಿಸಲಿ ಆತನಿಗೆ ನಿರ್ಬಂಧ ಹೇರಕೂಡದು.ವ್ಯಕ್ತಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು.ಯಾವುದೇ ದೇಶಕಾಲಗಳಲ್ಲಿ ವಾಸ ಮಾಡುತ್ತಿದ್ದರು.ಆತನನ್ನು ಮಾನವೀಯತೆಯ ದೃಷ್ಟಿಯಿಂದ ಕಾಣುವುದೇ ನಿಜವಾದ ವಿಶ್ವಧರ್ಮದ ಆದರ್ಶ. ವಿಶ್ವಧರ್ಮದಲ್ಲಿ ಎಲ್ಲಾ ಬಗೆಯ ಅಲ್ಪ, ಕ್ಷುದ್ರ, ಮನಸ್ತಾಪ ಇನ್ನೂ ಅನೇಕ ಕೀಳು ಭಾವನೆಗಳನ್ನು ಕಿತ್ತೊಗೆಯಬೇಕು.ಯಾವುದೇ ಧರ್ಮವನ್ನು ಯಾವುದೇ ಕೋಮು, ಪಂಗಡ, ದೇಶಗಳ ಚೌಕಟ್ಟಿನಲ್ಲಿ ಸಂಕುಚಿತಗೊಳಿಸಬಾರದು.

ವಿಶ್ವಧರ್ಮ ನಿಜವಾಗಿಯೂ ವಿಶ್ವವಾಗಿ ಪ್ರಿಯವಾಗಬೇಕು.ಧರ್ಮವು ವಿಶ್ವದ ಎಲ್ಲಾ ಒಳ್ಳೆಯ ಅಂಶಗಳನ್ನು ಒಳಗೊಂಡು ಬೆಳೆಯುತ್ತಾ ಜೊತೆಗೆ, ಒಳ್ಳೆಯ ಮೌಲ್ಯಗಳ ಸಂರಕ್ಷಣೆ ಅತ್ಯಗತ್ಯವಾದುದು.ಇಂತಹ ವಿಶಾಲ ದೃಷ್ಟಿಯನ್ನು ಹೊಂದಿದ ಧರ್ಮವು ಮಾನವನ ಕಲ್ಯಾಣಕ್ಕೆ ಸಹಕಾರಿಯಾಗಬೇಕು. "ಪ್ರತಿಯೊಂದು ಧರ್ಮವು ಒಂದು ಅನಂತ ವೃತ್ತ ಅದರ ಕೇಂದ್ರ ಬಿಂದುವು ಎಲ್ಲಾ ಕಡೆಯೂ ಇದೆ.ಆದರೆ ಅದರ ಪರಿಧಿ ಎಲ್ಲಿಯೂ ಇಲ್ಲ"2 ಎಂದು ತಿಳಿಸುತ್ತಾರೆ.ವಿವೇಕಾನಂದರು ವಿಶ್ವಧರ್ಮವನ್ನು ಕುರಿತು ಈ ರೀತಿ ಹೇಳುತ್ತಾರೆ. "ಮಾನವನನ್ನು ಪ್ರಚೋದಿಸುವ ಅತಿ ಶ್ರೇಷ್ಠ ಚಾಲಕ ಶಕ್ತಿಗಳಲ್ಲಿ ಧರ್ಮ ಒಂದು ಪ್ರಮುಖ ಶಕ್ತಿಯಾಗಿದೆ.ಈ ಜಗತ್ತಿನ ಪ್ರತಿಯೊಂದು ಆಧ್ಯಾತ್ಮಕ ವ್ಯಕ್ತಿಯ ಹಿಂದೆ ಧರ್ಮದ ಚಾಲಕಶಕ್ತಿ ಇದೆ."3

"ಸಮಾಜದಲ್ಲಿ ಮನಷ್ಯನ ಶೀಲವನ್ನು ರೂಢಿಸಲು ಒಳ್ಳೆಯ ಮತ್ತು ಭವ್ಯವಾಗಿರುವುದನ್ನು ಪಡೆಯುವುದಕ್ಕೆ ಮತ್ತು ತಾನು ಶಾಂತಿಯಿಂದ ಇರಲು ಹಾಗೂ ಇತರರಿಗೆ ಶಾಂತಿ ನೀಡಲು ಧರ್ಮ ಅತ್ಯಂತ ಸಹಾಯಕಾರಿಯಾದುದು"4 ಎನ್ನುತ್ತಾರೆ ವಿವೇಕಾನಂದರು. ವಿಶ್ವದಲ್ಲಿರುವ ಎಲ್ಲಾ ಧರ್ಮಗಳಲ್ಲಿಯೂ ಇರುವ ಬಾಹ್ಯ ಆಚರಣೆಗಳಾದ ಕಂದಾಚಾರ, ಗೊಡ್ಡು ಆಚಾರ, ಜಾತೀಯತೆ, ಮೇಲು–ಕೀಳುಗಳು ಲಿಂಗ ಭೇದ, ಕಪಟ ಮೋಸ, ಅಸತ್ಯ, ಅನ್ಯಾಯಗಳನ್ನು ಕಿತ್ತೊಗೆಯಬೇಕು

ಎನ್ನುವುದೇ ವಿವೇಕಾನಂದರ ಸ್ಪಷ್ಟ ನಿಲುವು. ಉದಾ: ಒಂದು ಹಣ್ಣನ್ನು ತಿನ್ನಬೇಕಾದರೆ ಅದರ ಹೊರ ಸಿಪ್ಪೆಯನ್ನು ಬಿಸಾಡಿ ಅದರಲ್ಲಿರುವ ತಿರುಳನ್ನು ಮಾತ್ರ ಸೇವಿಸುವಂತೆ ಧರ್ಮಗಳಲ್ಲಿರುವ ಸಂಕುಚಿತ ಭಾವನೆಗಳನ್ನು ದೂರ ಮಾಡಿ ಮಾನವರನ್ನು ತನ್ನವರನ್ನಾಗಿ ಕಾಣುವ ಮಾನವೀಯ ಮೌಲ್ಯಗಳಾದ ಸಮಾನತೆ, ಪ್ರೀತಿ, ಸೋದರತೆ, ತ್ಯಾಗ, ಸ್ನೇಹಗಳನ್ನು ಕಂಡುಕೊಂಡು ಎಲ್ಲರೂ ಒಂದೇ ಎನ್ನುವ ತತ್ವದಲ್ಲಿ ಜೀವಿಸುವುದು ನಿಜವಾದ ವಿಶ್ವಧರ್ಮ. ಧರ್ಮ ಯಾರೊಬ್ಬರ ಸ್ವತ್ತಾಗಬಾರದು. ಧರ್ಮ ಒಂದು ಸಂಸ್ಥೆಯ ಅಥವಾ ಒಬ್ಬ ವ್ಯಕ್ತಿಯ ಕೈಯಲ್ಲಿ ಕೇಂದ್ರೀಕೃತವಾದರೆ ಅಂತಹ ಧರ್ಮ ತನ್ನ ಅನಂತತೆಯನ್ನು ಕಳೆದುಕೊಂಡು ಸಂಕುಚಿತ ಧರ್ಮವಾಗುತ್ತದೆ. ಅಂತಹ ಧರ್ಮ ವಿಶ್ವಧರ್ಮವಾಗಲು ಸಾಧ್ಯವಿಲ್ಲ. "ಎಲ್ಲಿಯವರೆಗೆ ಧರ್ಮ ಪುರೋಹಿತಶಾಹಿ, ದೇವಸ್ಥಾನ, ಚರ್ಚ್, ಮಸೀದಿಗಳಲ್ಲಿ ಕೇಂದ್ರೀಕೃತವಾಗಿರುವುದೋ ಅಲ್ಲಿಯವರೆಗೆ ಧರ್ಮ ವಿಶ್ವ ಮಾನವತಾ ಧರ್ಮವಾಗಲಾರದು.ನಮಗೆ ಇಂದು ಬೇಕಾಗಿರುವುದು ಭಿನ್ನಭಿನ್ನ ಧರ್ಮಗಳಲ್ಲಿ ಒಂದು ಸೌಹಾರ್ದ ಭಾವನೆ"5 ಎನ್ನುತ್ತಾರೆ ವಿವೇಕಾನಂದರು.

ಈ ಪ್ರಪಂಚದಲ್ಲಿರುವ ಧರ್ಮಗಳು ಪರಸ್ಪರ ವಿರೋಧವಲ್ಲ. ಅವು ಒಂದಕ್ಕೊಂದು ಪೂರಕವಾಗಿವೆ. ವಿಶ್ವಶಕ್ತಿಯ ಒಂದೊಂದು ಅಂಶವೂ ಅವುಗಳಲ್ಲಿ ಅಡಗಿದೆ.ಅಂತಹ ಶಕ್ತಿಯನ್ನು ಅನುಷ್ಠಾನಕ್ಕೆ ತರಲು ಅವೆಲ್ಲ ಪ್ರಯತ್ನಿಸುತ್ತವೆ ಅಷ್ಟೇ.ಒಂದು ಧರ್ಮದ ಭಾವನೆಯೂ ಮತ್ತೊಂದು ಧರ್ಮದ ಭಾವನೆಯೊಂದಿಗೆ ಬೆರೆಯಬೇಕಾಗಿದೆ."ಮಾನವ ಅಲ್ಪಸತ್ಯದಿಂದ ಸತ್ಯಕ್ಕೆ ಪ್ರಯಾಣಿಸುತ್ತಿರುವನು.ಅಸತ್ಯದಿಂದ ಸತ್ಯಕಲ್ಲ"6 ಎಂದು ವಿವೇಕಾನಂದರು ಸಾರುತ್ತಾರೆ. ಹಿಂದೂ ಧರ್ಮದಲ್ಲಿ ದರಿದ್ರರನ್ನು ದೀನರನ್ನು ತುಳಿಯುವಂತೆ ಮತ್ತಾವ ಧರ್ಮದಲ್ಲಿಯೂ ಇಲ್ಲವೆಂದು ವಿವೇಕಾನಂದರು ಹೇಳುತ್ತಾರೆ.ಸ್ವಮತಾಂಧರರು ತಮ್ಮ ಸ್ವಾರ್ಥಕ್ಕಾಗಿ ರಚಿಸಿಕೊಂಡ ಕೆಲವು ಸ್ಮೃತಿ ಸಂಪ್ರದಾಯಗಳನ್ನು ಧರ್ಮವೆಂದು ಜನರಿಗೆ ಬೋಧಿಸಿದರು.ಹಿಂದೂಧರ್ಮದಲ್ಲಿನ ಶೋಷಣೆ ತಪ್ಪದಿದ್ದರೆ ಕಾಲಕ್ರಮೇಣ ಹಿಂದೂ ಧರ್ಮ ಅವನತಿ ಖಂಡಿತವೆಂದು ವಿವೇಕಾನಂದರು ಎಚ್ಚರಿಸಿದ್ದಾರೆ. ಹಿಂದೂಧರ್ಮದಲ್ಲಿ ಕೆಲವರನ್ನು ಮಾತ್ರ ತಮ್ಮವರೆಂದು ಉಳಿದವರನ್ನು ಮುಟ್ಟದಿರು ಮುಟ್ಟದಿರು ಎನ್ನುವ ಧರ್ಮ ಅದು ಧರ್ಮವೇ ಅಲ್ಲವೆಂದು ವಿವೇಕಾನಂದರು ಹೇಳುತ್ತಾರೆ. ವಿವೇಕಾನಂದರ ದೃಷ್ಟಿಯಲ್ಲಿ ವಿಶ್ವಧರ್ಮವೆಂದರೆ ಮಾನವತೆಯಲ್ಲ. ಒಂದು ಎಂಬ ಸಿದ್ಧಾಂತದಲ್ಲಿ ಮಾನವ ಜನಾಂಗವೆಲ್ಲ ನಂಬುವುದಾಗಿದೆ.ಇಂತಹ ವಿಶ್ವಧರ್ಮ ಅಸ್ತಿತ್ವದಲ್ಲಿರುವ ಪ್ರತ್ಯೇಕ ಧರ್ಮಗಳನ್ನು ಒಂದೇ ಧರ್ಮವನ್ನಾಗಿ ಮಾರ್ಪಡಿಸುವುದರಲ್ಲಿ ಇಲ್ಲ. ಇದು ಎಂದಿಗೂ ಸಾಧ್ಯವಾಗದ ಮಾತು.

ಪ್ರತಿಯೊಬ್ಬ ಮಾನವನಲ್ಲೂ ಧರ್ಮಸುಪ್ತವಾಗಿದೆ.ಅದಕ್ಕೆ ತಕ್ಕ ವಾತಾವರಣ ಪ್ರೋತ್ಸಾಹ ದೊರೆತಾಗ ಗುರಿ ಎಡೆಗೆ ಸಾಗುತ್ತದೆ.ವ್ಯಕ್ತಿ ಸ್ವಭಾವಕ್ಕೆ ಸರಿ ಹೊಂದದ ಧರ್ಮವನ್ನು ಬೋದಿಸಿದರೆ ನಾಶವಾಗುತ್ತದೆ ಎನ್ನುತ್ತಾರೆ ವಿವೇಕಾನಂದರು.

ವಿಶ್ವಧರ್ಮವು ವೈವಿಧ್ಯತೆಯಲ್ಲಿ ಏಕತೆಯನ್ನು ಪ್ರತಿಪಾದಿಸುತ್ತದೆ. 'ವೈವಿಧ್ಯವೇ ಜೀವನದ ಪ್ರಥಮ ನಿಯಮ' ಎನ್ನುತ್ತಾರೆ ವಿವೇಕಾನಂದರು.ಈ ಜಗತ್ತಿನಲ್ಲಿ ಎಲ್ಲರೂ ಒಂದೇ ಆಕಾರವನ್ನು ಹೊಂದಲಾರರು.ಅದೇ ರೀತಿ ಎಲ್ಲರೂ ಒಂದೇ ರೀತಿ ಯೋಚಿಸಲಾರರು.ಅವರವರ ಅಭಿವ್ಯಕ್ತಿಗೆ ತಕ್ಕಂತೆ ಯೋಚಿಸುವರು.ಎಲ್ಲರೂ ಒಂದೇ ರೀತಿ ಯೋಚಿಸಿದರೆ ವಿಜ್ಞಾನ ಬೆಳೆಯುವುದು ಕಷ್ಟವಾಗುತ್ತಿತ್ತು.ಎಲ್ಲರೂ ಒಂದೇ ಧರ್ಮವನ್ನು ಆಚರಿಸಬೇಕು ಎಂದು ಹೇಳುವುದು.'ಒಂದೇ ಅಂಗಿಯನ್ನು ಎಲ್ಲಾ ವಯಸ್ಸಿನವರಿಗೂ ಎಲ್ಲಾ ಗಾತ್ರದವರಿಗೂ ಹಾಕಲು ಯತ್ನಿಸಿದಂತೆ' ಎನ್ನುವ ವಿವೇಕಾನಂದರ ಮಾತು ಅರ್ಥಪೂರ್ಣವಾದುದು.ಎಲ್ಲರೂ ಒಂದೇ ಧರ್ಮವನ್ನು ಅನುಸರಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಒಬ್ಬೊಬ್ಬರ ಮನಸ್ಸು ಅವರದೇ ಆದ ಬೇರೆ ಬೇರೆ ರೀತಿಯಲ್ಲಿರುವುದು.

ಆದುದರಿಂದ ಧರ್ಮವು ಸಹ ಬೇರೆಯಾಗಬೇಕಾಗಿರುವುದು.ಕೆಲವರಿಗೆ ಬಾಹ್ಯ ಆಚಾರಗಳು ತುಂಬಿರುವ ಧರ್ಮ ಇಷ್ಟ.ಇನ್ನೂ ಕೆಲವರಿಗೆ ಯಾವ ಆಚಾರವನ್ನು ಕಂಡರೂ ಆಗುವುದಿಲ್ಲ. ಆದುದರಿಂದಲೇ ಪ್ರಪಂಚದಲ್ಲಿ ಅಷ್ಟೊಂದು ಧರ್ಮವಿರುವುದು.ಮಾನವ ಆಚರಿಸುವ ಪ್ರತಿಯೊಂದು ಧರ್ಮವು ದೇವರೆಡೆಗೆ ಹೋಗಲು ಪ್ರಯತ್ನಿಸುತ್ತವೆ. ಪ್ರತಿಯೊಂದು ಧರ್ಮದ ಗುರಿಯು ಅಂತಿಮ ಸತ್ಯವನ್ನು ಅರಿಯುವುದೇ ಆಗಿದೆ.ಇದನ್ನೇ ಭಗವತ್ ಸಾಕ್ಷಾತ್ಕಾರ ಎಂದು ಕರೆಯುವರು.ವಿಶ್ವಧರ್ಮದ ಗುರಿ ಸಮಾನತೆ. ವಿಶ್ವಬಾಂಧವ್ಯ ಸಹೋದರತೆ, ವಿಶ್ವಮಾನವ ಪ್ರೇಮ, ವಿಶ್ವ ಅನುಕಂಪಗಳು ವಿಶ್ವದಲ್ಲಿರಬೇಕು ಎನ್ನುವರು.

ವಿಶ್ವಧರ್ಮದಲ್ಲಿ ಧಮನಿಗಳಲ್ಲಿ ಹರಿಯುತ್ತಿರುವ ರಕ್ತ ಒಬ್ಬ ವ್ಯಕ್ತಿಗೆ ಪ್ರತ್ಯೇಕವಾದುದಲ್ಲ. ಇಡೀ ಜಗತ್ತಿನಲ್ಲಿರುವ ಮಾನವರ ಧಮನಿಗಳಲ್ಲಿ ಹರಿಯುತ್ತಿರುವುದಾಗಿದೆ.ಬಾಹ್ಯ ಕಟ್ಟುಪಾಡುಗಳ ನಿರ್ಧಿಷ್ಟ ಆಚರಣೆಗಳ ಅಡಿಗೆ ಮನೆ ಧರ್ಮ ಅದಲ್ಲ. ಭಗವಂತನನ್ನು ತನ್ನ ಹೃದಯದಲ್ಲಿ ಅನುಭವಿಸಿದರೆ ಪ್ರಪಂಚದ ಕ್ಷಣಿಕ ಸುಖದಿಂದ ಪಾರಾಗಿದ್ದರೆ ಅಂತವನೇ ನಿಜವಾದ ಮಹಾತ್ಮ. ವಿಶ್ವಧರ್ಮದ ಪ್ರಮಾಣ ಇಡೀ ಮಾನವ ಕೋಟಿಗೆ ಪ್ರೀತಿ ಮತ್ತು ಅನುಕಂಪವನ್ನು ನೀಡುವುದು.ಬಹಿಷ್ಕಾರವೆಂಬುದೇ ವಿಶ್ವಧರ್ಮದ್ದಲ್ಲಿ ಇಲ್ಲ. ಎಲ್ಲರಿಗೂ ಸ್ವಾಗತ. "ಚರ್ಚ್‌ಗಳು, ಮಸೀದಿಗಳು, ಗುಡಿ ಗೋಪುರಗಳು, ಬಸದಿ– ಸ್ಥೂಪಗಳು ಬಾಹ್ಯ ಆಚರಣೆಗಳು.ಚಿಹ್ನೆಗಳು. ಇವೆಲ್ಲಾ ಮಕ್ಕಳಿಗೆ ಒಳ್ಳೆಯವು ಆದರೆ ಮಕ್ಕಳು ಬೆಳೆದಂತೆಲ್ಲಾ ಅವುಗಳನ್ನು ಮೀರಿ ಹೊರಬರಬೇಕು"8 ಎಂಬುದನ್ನು ಉದಾಹರಿಸುತ್ತ ಹೀಗೆ ಹೇಳುತ್ತಾರೆ. 'ತೆಂಗಿನ ಮರ

ಎತ್ತರಕ್ಕೆ ಬೆಳೆದಂತೆ ತನ್ನ ಗರಿಗಳನ್ನು ಕೆಳಕ್ಕೆ ಬೀಳಿಸಿ ಒಳ್ಳೆಯ ಫಲವನ್ನು ಕೊಡುವಂತೆ, ಮಾನವ ತನ್ನಲ್ಲಿರುವ ಕೆಟ್ಟ ಗುಣಗಳನ್ನು ತ್ಯಜಿಸಿ ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳಬೇಕು ಎನ್ನುತ್ತಾರೆ ವಿವೇಕಾನಂದರು.

ವಿವೇಕಾನಂದರು ಜಗತ್ತನ್ನು ದೇವಾಲಯವೆಂದರು.ಜೀವವನ್ನು ಶಿವನೆಂದರು.ಆ ಶಿವನ ಸೇವೆಯೇ ಕರ್ತವ್ಯವೆಂದರು.ಮಾನವ ಸೇವೆ, ಮಾನವ ಪ್ರೀತಿ, ಹೃದಯವಂತಿಕೆ, ನ್ಯಾಯಪರತೆ, ಸೌಜನ್ಯ, ಸಜ್ಜನಿಕೆಗಳ ಮಾನವನ ಕರ್ತವ್ಯವೆಂದರು.ನಿಷ್ಕಾಮ ಕರ್ಮಯೋಗವನ್ನು ಅಕ್ಷರಶಃ ಆಚರಿಸಿ ಸರ್ವರಿಗೂ ಮುಕ್ತಿಯನ್ನು ದೊರಕಿಸಿಕೊಡುವುದೇ ವಿಶ್ವಧರ್ಮದ ಪವಿತ್ರ ಕಾರ್ಯವೆಂದರು.ಆಧ್ಯಾತ್ಮಿಕತೆ, ವಿಶ್ವ ಪ್ರೇಮ, ವಿಶ್ವ ಭ್ರಾತೃತ್ವವನ್ನು ಬೋಧಿಸುವ ದಿವ್ಯ ಜೀವನಕ್ಕೆ ಮತ್ತೊಂದು ಹೆಸರೇ ವಿಶ್ವಮಾನವತಾ ಧರ್ಮ.

ಮಾನವ ನಿಸ್ವಾರ್ಥತೆಯ ಸಾಕಾರ ಮೂರ್ತಿ ಆಗಬೇಕು.ಅದೇ ಜೀವನಕ್ಕೆ ಸಲ್ಲಿಸುವ ಮಹಾ ಕೊಡುಗೆ.ವಿವೇಕಾನಂದರು ಬೋಧಿಸುವ ವಿಶ್ವಧರ್ಮ ಈ ಜಗತ್ತಿನ ಇಡೀ ಮಾನವ ಲೋಕ ಧರ್ಮವಾಗಿದೆ.ನಿಜವಾದ ವಿಶ್ವಧರ್ಮ ಅಡಗಿರುವುದು ಜನಸಾಮಾನ್ಯರಲ್ಲೂ ದೀನ ದಲಿತರಲ್ಲೂ ಭಗವಂತನನ್ನು ಕಾಣುವುದಾಗಿದೆ.ಏಕೆಂದರೆ ದೇವರು ಸರ್ವವ್ಯಾಪಿಯಾಗಿರುವುದರಿಂದ ಎಲ್ಲ ವಸ್ತುವಿನಲ್ಲಿಯೂ ಪ್ರಕಾಶಿಸುತ್ತಿರುವನು.ಮನುಷ್ಯನಿಗೆ ದೇವರು ಮನುಷ್ಯನಲ್ಲಿ ಮಾತ್ರ ಗೋಚರಿಸುವನು.ಪಾಪಿ ದೇವೋಭವ, ಮೂರ್ಖದೇವೋಭವ ಎಂಬುದು ವಿವೇಕಾನಂದರ ಅಂತರಾಳದ ಮಾತಾಗಿತ್ತು.ಧರ್ಮ ಜಾಗೃತವಾದರೆ ಉಳಿದೆಲ್ಲವುದಕ್ಕೂ ಪರಿಹಾರ ಸಿಗುವುದು ಎಂಬ ಮಹಾ ಸತ್ಯವನ್ನು ವಿವೇಕಾನಂದರು ಕನ್ಯಾಕುಮಾರಿಯ ಬಂಡೆಯ ಮೇಲೆ ಕುಳಿತು ತಪಸ್ಸಿನಿಂದ ಕಂಡುಕೊಂಡರು.

ಅಂತಿಮವಾಗಿ ವಿವೇಕಾನಂದರ ದೃಷ್ಟಿಯಲ್ಲಿ ಧರ್ಮವೆಂದರೇನು?ಎಂಬುದನ್ನು 11ನೇ ಸೆಪ್ಟೆಂಬರ್ 1893ರಲ್ಲಿ ಅಮೆರಿಕಾದ ಚಿಕಾಗೋ ನಗರದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಬಳಸಿರುವ ಪದಗಳನ್ನು ಗಮನಿಸಬೇಕಾಗುವುದು.ಅಮೆರಿಕಾದ ಸಹೋದರ ಮತ್ತು ಸಹೋದರಿಯರೆ ಎಂದು ಪ್ರಾರಂಭಿಸಿದ ಅವರು ಎಲ್ಲಾ ಧರ್ಮಗಳು ಸತ್ಯ, ಎಲ್ಲಾ ಧರ್ಮಗಳು ಗೌರವಕ್ಕೆ ಪಾತ್ರವಾಗಿವೆ. ಎಲ್ಲಾ ಧರ್ಮಗಳ ಗುರಿಯೂ ಒಂದೇ.ಮಾರ್ಗಗಳು ಮಾತ್ರ ಬೇರೆ ಬೇರೆ.

"ಸೋದರರೆ ಬೆಟ್ಟಗುಡ್ಡಗಳಲ್ಲಿ ಹುಟ್ಟಿದ ಹಲವು ನದಿಗಳು ಕೊನೆಗೆ ಎಲ್ಲಾ ನದಿಗಳು ಹರಿದು ಬಂದು ಸಾಗರಕ್ಕೆ ಸೇರುವಂತೆ ಹೇ ಭಗವಂತನೇ ಮಾನವರು ಅವರವರ ಸಂಸ್ಕಾರಗಳಿಗೆ ತಕ್ಕಂತೆ ಅನುಸರಿಸುವ ನೇರವಾಗಿಯೂ ವಕ್ರವಾಗಿಯೂ ಬೇರೆ ಬೇರೆ ದಾರಿಗಳೆಲ್ಲ ನಿನ್ನಡೆಗೆ ಕರೆದೊಯ್ಯುವುವು"7.ಅನೇಕತೆಯಲ್ಲಿ ಏಕತೆಯನ್ನು ಕಾಣುವುದೇ ವಿಶ್ವಧರ್ಮದ ಸಾರ. ವಿವೇಕಾನಂದರು

ಇಡೀ ವಿಶ್ವಕ್ಕೆ ವಿಶ್ವಧರ್ಮವನ್ನು ಬೋಧಿಸಿರುವುದನ್ನು ನಾವು ಗಮನಿಸಬಹುದು.ಒಟ್ಟಿನಲ್ಲಿ ನಾವು ವಿಶ್ವಧರ್ಮದ ಅವಶ್ಯಕತೆಯನ್ನು ಹೀಗೆ ಅರ್ಥೈಸಬಹುದು.ಧರ್ಮ ದೇವರುಗಳ ಹೆಸರಿನಲ್ಲಿ ನಡೆಯುತ್ತಿರುವ ಗಲಭೆಗಳು, ಸಂಘರ್ಷಗಳು, ರಕ್ತಪಾತಗಳು ನಿಲ್ಲಬೇಕಾದರೆ ವಿವೇಕಾನಂದರು ಬೋಧಿಸಿದ ವಿಶ್ವಧರ್ಮವನ್ನು ಸಮಾಜ ಅನುಸರಿಸಬೇಕಾಗಿದೆ.ಮಾನವೀಯತೆಯೇ ಈ ವಿಶ್ವಧರ್ಮದ ಕೇಂದ್ರ ಬಿಂದು.ಮಾನವನನ್ನು ಮಾನವನನ್ನಾಗಿ ಗೌರವಿಸುವ ಮತ್ತು ಅವನ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದೇ ವಿಶ್ವಧರ್ಮದ ತಿರುಳು.ಎಲ್ಲಾ ಜೀವಂತ ಧರ್ಮಗಳನ್ನು ಗೌರವಿಸುತ್ತ ವ್ಯಕ್ತಿಯು ಆಧ್ಯಾತ್ಮಿಕತೆಯನ್ನು ಮೈಗೂಡಿಸಿಕೊಂಡಾಗ ಭಿನ್ನತೆಗಳೆಲ್ಲ ಮಾಯವಾಗಿ ವಿಶ್ವಶಾಂತಿ ನೆಲೆಸುವುದು.

## ಕೊನೆ ಟಿಪ್ಪಣಿಗಳು

1. ಸೋಮನಾಥಾನಂದ – ಸ್ವಾಮಿವಿವೇಕಾನಂದರ ಜೀವನ ಚರಿತ್ರೆ, ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು, ಪುಟ.2
2. ಡಾ.ವಿ.ಎನ್. ಶೇಷಗಿರಿರಾವ್, ಸಮಕಾಲೀನ ಭಾರತೀಯ ತತ್ತ್ವಶಾಸ್ತ್ರ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1985, ಪುಟ.86
3. ಸ್ವಾಮಿವಿವೇಕಾನಂದರ ಕೃತಿ ಶ್ರೇಣಿ. ಸಂಪುಟ–3, ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು, 1984, ಪುಟ. 12
4. ಅದೇ, ಪುಟ. 13
5. ಅದೇ, ಪುಟ. 14
6. ಸ್ವಾಮಿವಿವೇಕಾನಂದರ ಕೃತಿ ಶ್ರೇಣಿ, ಸಂಪುಟ–3, ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು, 1962, ಪುಟ. 275
7. ಜೀವ ಈಶ್ವರ ಧರ್ಮ, ಪುಟ. 11